# ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಮಾಗಡಿ

## ಕ್ರಿಮಿನಲ್ ಪ್ರಕರಣ ಸಂಖ್ಯೆ ಃ 4186 /2022

**ಚಾಸಾ ಃ- 04 / ಪ್ರಾಸಾ ಃ- 02**

| | |
|---|---|
| ಹೆಸರು | ಮಂಜುನಾಥ |
| ತಂದೆ ಹೆಸರು | ಚಂದ್ರಶೇಖರ್ |
| ವಯಸ್ಸು | 42 |
| ಉದ್ಯೋಗ | ಅಬಕಾರಿ ಉಪ ನಿರೀಕ್ಷಕರು, ಹನುಮಂತನಗರ ವಲಯ ಬೆಂಗಳೂರು |
| ವಿಳಾಸ | ಬೆಂಗಳೂರು |

**ದಿನಾಂಕಃ 07-10-2023 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

ದಿನಾಂಕ 30.01.2020 ರಿಂದ 08.03.2022 ರವರೆಗೆ ಅಬಕಾರಿ ಮುಖ್ಯ ಪೇದೆ ಎಂದು ಮಾಗಡಿ ವಲಯದಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 15.06.2021 ರಂದು ನಾವು ಕುದೂರು ಗ್ರಾಮದಲ್ಲಿ ಗಸ್ತು ಮಾಡುತ್ತಿರುವಾಗ ನಮ್ಮ ಅಬಕಾರಿ ನಿರೀಕ್ಷಕರಿಗೆ ಒಂದು ಮಾಹಿತಿಬಂದಿರುತ್ತದೆ. ಅದೇನೆಂದರೆ ಸುಗ್ಗನಹಳ್ಳಿ ಗ್ರಾಮದಲ್ಲಿ ಎಸ್ ಎಸ್ ಕುಮಾರ್ ಎಂಬುವವರು ಪೆಟ್ಟಿಗೆ ಅಂಗಡಿಯಲ್ಲಿ ಮದ್ಯವನ್ನು ಹೊಂದಿ ಮಾರಾಟ ಮಾಡುತ್ತಿದ್ದಾನೆ ಎಂದು ಮಾಹಿತಿ ಬಂದ ನಂತರ ನಾವು ಸದರಿ ಸ್ಥಳಕ್ಕೆ ಸರ್ಕಾರಿ ವಾಹನ ಸಂಖ್ಯೆ ಕೆಎ 01 ಜಿ 6209 ರಲ್ಲಿ ತೆರಳಿರುತ್ತೇವೆ. ನಂತರ ಸ್ಥಳೀಯರಿಬ್ಬರನ್ನು ಪಂಚರನ್ನಾಗಿ ಬರಲು ಕೇಳಿಕೊಂಡಿರುತ್ತೇವೆ. ನಂತರ ಅಂಗಡಿಯ ಹಿಂದುಗಡೆ ವಾಹನವನ್ನು ನಿಲ್ಲಿಸಿಕೊಂಡು ಅಂಗಡಿಗೆ ತೆರಳುವ

ಸಮಯದಲ್ಲಿ ಆತನು ನಾವುಗಳು ಸಮವಸ್ತ್ರ ದಲ್ಲಿ ಇರುವುದನ್ನು ನೋಡಿ ಓಡಿ ಹೋಗಿರುತ್ತಾನೆ. ನತಂರ ನಾವುಗಳು ಆತನನ್ನು ಹಿಡಿಯಲು ಪ್ರಯತ್ನಿಸಿದ್ದೆವು. ಆಗ ಅಲ್ಲೆ ಅಕ್ಕಪಕ್ಕದ ಯಾವುದೋ ಮನೆಯಲ್ಲಿ ನುಗ್ಗಿರುತ್ತಾನೆ. ನಮಗೆ ಆತನುನ ಸಿಗಲಿಲ್ಲ. ನಂತರ ನಾವು ಪುನಃ ಅಬಕಾರಿ ನಿರೀಕ್ಷಕರು ಇದ್ದ ಸ್ಥ,ಳಕ್ಕೆ ವಾಪಸ್ಸು ಬಂದಿರುತ್ತೇವೆ. ನಂತರ ನಾವು ಅಬಕಾರಿ ನಿರೀಕ್ಷಕರಿಗೆ ಆರೋಪಿಯು ತಪ್ಪಿಸಿಕೊಂಡು ಓಡಿಹೋದ ಬಗ್ಗೆ ತಿಳಿಸಿರುತ್ತೇವೆ. ನಂತರ ಅಂಗಡಿಯ ಒಳಗೆ ಹೋಗಿ ಅಲ್ಲಿ ಒಂದು ಕ್ಯಾಶ್ ಟೇಬಲ್ ಇದ್ದು ಅದರ ಕೆಳಗಡೆ 4 ರಟ್ಟಿನ ಪೆಟ್ಟಿಗೆಗಳು ಇದ್ದವು. ಅವುಗಳನ್ನು ಒಂದೊಂದಾಗಿ ನಾವು ತೆಗೆದು ನೋಡಿರುತ್ತೇವೆ. ಒಂದು ಪೆಟ್ಟಿಗೆಯಲ್ಲಿ 375 ಮಿಲಿಯ 8 ಬ್ಯಾಗ್ ಪೇಪರ್ ಡಿಲಕ್ಸ್ ವಿಸ್ಕಿಯ ಬಾಟಲಿಗಳು ಇದ್ದು ಕಂಡು ಬಂದಿರುತ್ತದೆ, ಇನ್ನೊಂದು ರಟ್ಟಿನ ಪೆಟ್ಟಿಗೆಯಲ್ಲಿ 90 ಎಂ ಎಲ್ ನ 38 ಬ್ಯಾಗ್ಪೇಪರ್ ಡಿಲಕ್ಸ್ ? ವಿಸ್ಕಿಯ ಟೆಟ್ರಾ ಪ್ಯಾಕ್ ಗಳು ಇದ್ದು ಕಂಡು ಬಂದಿರುತ್ತದೆ, ಇನ್ನೊಂದು ಪೆಟ್ಟಿಗೆಯಲ್ಲಿ 90 ಎಂ ಎಲ್ ನ 55 ರಾಜಾವಿಸ್ಕಿಯ ಟೆಟ್ರಾ ಪ್ಯಾಕ್ ಗಳು ಕಂಡು ಬಂದಿರುತ್ತವೆ. ಇನ್ನೊಂದು ರಟ್ಟಿನ ಪೆಟ್ಟಿಗೆಯಲ್ಲಿ 180 ಎಂ ಎಲ್ ನ 17 ಮ್ಯಾಕ್ ಡೋವೆಲ್ ಇಂಡಿಯ ಬ್ರಾಂಡಿಯ ಟೆಟ್ರಾ ಪ್ಯಾಕ್ ಗಳು ಕಂಡು ಬಂದಿರುತ್ತವೆ. ನಂತರ ನಾವು ಪಂಚರಿಗೆ ಸದರಿ ವಿಷಯವನ್ನು ತಿಳಿಸಿ ಇಲಾಖಾ ವಶಕ್ಕೆ ಪಡೆದಿರುತ್ತೇವೆ. ನಂತರ ಸ್ಥಳದಲ್ಲಿಯೇ ಮಹಜರು ಕ್ರಮ ಜರುಗಿಸಿ ಸಹಿಯನ್ನು ಪಡೆದಿರುತ್ತೇವೆ. ಈಗ ಸಾಕ್ಷಿಗೆ ನಿಪಿ-1 ಅನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ, ಈಗ ಆರೋಪಿಯು ನ್ಯಾಯಾಲಯದಲ್ಲಿ ಇದ್ದಾರೆ. ಜಪ್ತಿ ಪಡಿಸಿಕೊಂಡ ಮದ್ದೆಮಾಲುಗಳನ್ನು ನೋಡಿದರೆ ಗುರುತಿಸುತ್ತೇನೆ, ಈಗ ಸಾಕ್ಷಿಗೆ ಮುದ್ದೆಮಾಲು 1 ರಿಂದ 4 ಅನ್ನು ತೋರಿಸಲಾಗಿ ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು ಃ- ಶ್ರೀ. ಎಸ್ ಜಿ ಯು** ವಕೀಲರಿಂದ **ಆರೋಪಿಗಳ** ಪರವಾಗಿ ಃ-

ನೀವು ಘಟನಾ ಸ್ದಳಕ್ಕೆ ಹೋಗಿ ಆರೋಪಿಯನ್ನು ಹಿಡಿಯಲು ಪ್ರಯತ್ನ ಪಟ್ಟಾಗ ಎಷ್ಟು ಗಂಟೆ ಆಗಿತ್ತು ಎಂದರೆ ಸಾಕ್ಷಿ 6.00 ಗಂಟೆಯಾಗಿತ್ತು ಎಂದು ನುಡಿಯುತ್ತಾರೆ. ಆರೋಪಿಯನ್ನು ಸುಮಾರು ಎಷ್ಟು ಹೊತ್ತು ಹುಡುಕಿರುತ್ತೀರಿ ಎಂದರೆ ಸಾಕ್ಷಿ 15 ನಿಮಿಷ ಎಂದು ನುಡಿಯುತ್ತಾರೆ. ಆಗ ಸುತ್ತ ಮುತ್ತ ಊರಿನ ಗ್ರಾಮಸ್ಥರು ಇರಲಿ ಲ್ಲವಾ ಎಂದರೆ ಸಾಕ್ಷಿ ಅಷ್ಟು ಜನರು ಇದ್ದಿರಲಿಲ್ಲ 7-8 ಜನರು ಇದ್ದರು ಎಂದು ನುಡಿಯುತ್ತಾರೆ. ಸದರಿ 7- 8 ಜನರು ಸ್ದಳಕ್ಕೆ ಬರಲಿಲ್ಲವಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿಯವರನ್ನು ಆರೋಪಿ ಓಡಿ ಹೋದ ಬಗ್ಗೆ ಕೇಳಿರುತ್ತೀರಾ ಎಂದರೆ ಸಾಕ್ಷಿ ಕೇಳಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ 7-8 ಜನರನ್ನು ಸ್ದಳಕ್ಕೆ ಬನ್ನಿರಿ ಎಂದು ಕರೆದಿರುತ್ತೀರಾ ಎಂದರೆ ಸಾಸಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಚಾಸಾ-2 ಮತ್ತು 3 ರವರು ಎಲ್ಲಿ ಇದ್ದರು ಎಂದರೆ ಸಾಸಕ್ಷಿ ಗ್ರಾಮದಲ್ಲಿ ಇದ್ದರು ಯಾವುದೋ ಕೆಲಸಕ್ಕೆ ಬಂದಿದ್ದರು ಎಂದು ನುಡಿಯುತ್ತಾರೆ. ಸದರಿಯವರು 6.30 ಗಂಟೆಗೆ ಸಿಕ್ಕಿರುತ್ತಾರೆ ಎಂದರೆ ಸಾಕ್ಷಿ 5.50 ಕ್ಕೆ ಎಂದು ನುಡಿಯುತ್ತಾರೆ. ಘಟನಾ ಸ್ದಳಕ್ಕೆ ಹೋಗುವ ಮುಂಚೆಯೇ ಚಾಸಾ-2 ಮತ್ತು 3 ರವರನ್ನು ಕರೆದುಕೊಂಡು ಹೋಗಿರುತ್ತೀರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಮಾಹಿತಿ ಬಂದಾಗ ನೀವು ಚಾಸಾ-1 ರವರ ಜೊತೆ ಇದ್ದಿರ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ, ಎಷ್ಟು ಗಂಟೆಗೆ ಮಾಹಿತಿ ಬಂದಿರುತ್ತದೆ ಎಂದರೆ ಸಾಕ್ಷಿ 5.40 ಕ್ಕೆ ಎಂದು ನುಡಿಯುತ್ತಾರೆ. ದಿನಾಂಕ 15.06.2021 ರಂದು ನೀವು ದಾಳಿ

ಮಾಡಿರುತ್ತೀರಿ ಹಾಗೂ ಆ ಸಮಯದಲ್ಲಿ ಆರೋಪಿಯು ಓಡಿ ಹೋಗಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳ ಹೇಳುತ್ತಿರುವುದಿಲ್ಲವೆಂದು ನುಡಿಯುತ್ತಾರೆ, ಸದರಿ ದಿನದಂದು ಮುದ್ದೆಮಾಲು 1 ರಿಂದ 4 ಗಳನ್ನು ಜಪ್ತಿ ಪಡಿಸಿಕೊಂಡಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಹೇಳುತ್ತಿರುವುದಿಲ್ಲವೆಂದು ನುಡಿಯುತ್ತಾರೆ. ಮಹಜರ್ ಮಾಡಿದದಂತಹ ಸ್ದಳದಲ್ಲಿ ಆರೋಪಿಯ ಯಾವುದೇ ಅಂಗಡಿ ಇರುವುದಿಲ್ಲ ಹಾಗೂ ಆರೋಪಿಯು ಯಾವುದೇ ವಸ್ತುವನ್ನು ಮಾರಾಟ ಮಾಡುತ್ತಿರಲಿಲ್ಲ ಎಂದರೆ ಸಾಕ್ಷಿ ನಮಗೆ ಬೇರ ಅಂಗಡಿಯ ವಿರುದ್ದ ಯಾವುದೇ ದೂರು ಬಂದಿರುವುದಿಲ್ಲ ಎಂದು ನುಡಿಯುತ್ತಾರೆ. ಮದ್ಯದ ಬಾಟಲಿಗಳನ್ನು ಸ್ಥಳದಲ್ಲಿಯೇ ವಶಪಡಿಸಿಕೊಂಡಿರುವುದಿಲ್ಲ ನೀವು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸ್ಥಳದಲ್ಲಿ ವಶಪಡಿಸಿಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ನಿಮ್ಮ ಮೇಲಾಧಿಕಾರಿಗಳ ಮಾತನ್ನು ಕೇಳಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತ್ರೆ.

**ಮರು ವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್?ಸಿ. ಮಾಗಡಿ.**

# ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಮಾಗಡಿ

## ಕ್ರಿಮಿನಲ್ ಪ್ರಕರಣ ಸಂಖ್ಯೆ ಃ 4186 /2022

**ಚಾಸಾ ಃ- 01 / ಪ್ರಾಸಾ ಃ- 01**

| | |
|---|---|
| ಹೆಸರು | ಶಿವಭಾವಿಕಟ್ಟಿ |
| ತಂದೆ ಹೆಸರು | ಶಿವಲಿಂಗಪ್ಪ |
| ವಯಸ್ಸು | 46 |
| ಉದ್ಯೋಗ | ಅಬಕಾರಿ ಉಪಅಧಿಕ್ಷಕರು ಕೆಂದ್ರ ಕಬಛೇರಿ ಬೆಂಗಳೂರು |
| ವಿಳಾಸ | ಬೆಂಗಳೂರು |

**ದಿನಾಂಕಃ 07-10-2023 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

ದಿನಾಂಕ 13.10.2014 ರಿಂದ 21.02.2022 ರವರೆಗೆ ಅಬಕಾರಿ ನಿರೀಕ್ಷಕನಾಗಿ ಮಾಗಡಿ ವಲಯದಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 15.06.2021 ರಂದು ನಾನು ಮತ್ತು ಸಿಬ್ಬಂದಿಗಳು ಸರ್ಕಾರಿ ವಾಹನ ಸಂಖ್ಯೆ ಕೆಎ-01 ಜಿ 6209 ರಲ್ಲಿ ಕುದೂರು ಗ್ರಾಮದಲ್ಲಿ ಗಸ್ತು ಮಾಡುತ್ತಿರುವಾಗ ನಮಗೆ ಒಂದು ಖಚಿತ ಮಾಹಿತಿಬಂದಿರುತ್ತದೆ. ಅದೇನೆಂದರೆ ಸುಗ್ಗನಹಳ್ಳಿ ಗ್ರಾಮದಲ್ಲಿ ಒಬ್ಬ ವ್ಯಕ್ತಿಯು ಅಕ್ರಮವಾಗಿ ಮದ್ಯವನ್ನು ತಂದು ಅಂಗಡಿಯಲ್ಲಿ ಮಾರಾಟ ಮಾಡುತ್ತಿದ್ದಾನೆ ಆತನ ವಿರುದ್ದ ಕ್ರಮ ಕೈಗೊಳ್ಳಿ ಎಂದು ಮಾಹಿತ ಬಂದ ಮೇರೆಗೆ ನಾನು ಮತ್ತು ಸಿಬ್ಬಂದಿಗಳು ಸದರಿ ಸುಗ್ಗನಹಳ್ಳಿ ಗ್ರಾಮಕ್ಕೆ ತೆರಳಿ ಸದರಿ ಸುಗ್ಗನಹಳ್ಳಿ ಗ್ರಾಮದಲ್ಲಿ ಪಂಚರನ್ನು ಬರಮಾಡಿಕೊಂಡು ಇದ್ದ ವಿಷಯವನ್ನು ಅವರಿಗೆ ತಿಳಿಸಿ ನಮಗೆ ಪಂಚರಾಗಿ

ಸಹಾಯ ಮಾಡಲು ಲಿಖಿತವಾಗಿ ನೋಟೀಸ್ ಮೂಲಕ ಕೇಳಿಕೊಂಡಿರುತ್ತೇವೆ. ಸದರಿಯವರು ಕೂಡ ಒಪ್ಪಿ ನಮ್ಮ ಜೊತೆ ಬರಲು ಸಹಕರಿಸಿರುತ್ತಾರೆ. ನಂತರ ಸಿಬ್ಬಂದಿ ಗಳು ಹಾಗೂ ಪಂಚರು ಒಟ್ಟುಗೂಡಿ ಸದರಿ ಆರೋಪಿಯ ಸ್ಥ,ಳಕ್ಕೆ ಹೋಗಲಾಗಿ ಆರೋಪಿಯು ಅಧಿಕಾರಿಗಳು ಸಮವಸ್ತ್ರದಲ್ಲಿ ಇರುವುದನ್ನು ಕಂಡು ಅಂಗಡಿಯಲ್ಲಿ ಇದ್ದ ಆರೋಪಿಯು ಓಡಿಹೋಗಲು ಪ್ರಯತ್ನಿಸಿರುತ್ತಾನೆ. ನಮ್ಮ ಸಿಬ್ಬಂದಿಗಳು ಆತನನ್ನು ಹಿಡಿಯಲು ಪ್ರಯತ್ನಿಸಲಾಗಿ ಆತ ಓಡಿಹೋಗಿ ತಪ್ಪಿಸಿಕೊಳ್ಳುತ್ತಾನೆ.

ನಂತರ ಸದರಿ ಅಂಗಡಿಯನ್ನು ತಪಾಸಣೆ ಮಾಡಲು ನಮಗೆ ಕಾಲಾವಕಾಶ ಇರದ ಕಾರಣ ಸ್ದ.,ಳದಲ್ಲಿಯೇ ಅಬಕಾರಿ ಕಾಯ್ದೆ ಕಲಂ 54 ರ ಪ್ರಕಾರ ಶೋಧನಾ ವಾರೆಂಟ್ ಅನ್ನು ತಯಾರಿಸಿ ಪಂಚರ ಸಹಿ ಪಡೆದುಕೊಂಡು ಹಾಗೂ ಪಂಚರ ಅಂಗಶೋಧನೆಯನ್ನು ಮಾಡಿ ಅಂಗಡಿ ಒಳಗೆ ಹೋಗಿ ಶೋಧನೆ ಮಾಡಲಾಯಿತು. ಅಂಗಡಿಯ ಕ್ಯಾಶ್ ಟೇಬಲ್ ಕೆಳಗಡೆ ನೋಡಲಾಗಿ 4 ರಟ್ಟಿನ ಪೆಟ್ಟಿಗೆಗಳು ಇದ್ದುದ್ದು ಕಂಡು ಬಂದಿರುತ್ತದೆ. ಸದರಿ ಪೆಟ್ಟಿಗೆಗಳನ್ನು ಕೂಲಂಕುಶವಾಗಿ ಪರಿಶೀಲಿಸಲಾಗಿ ಮೊದಲನೆ ಪೆಟ್ಟಿಗೆಯಲ್ಲಿ 375 ಮಿಲಿಯ 8 ಬ್ಯಾಗ್ ಪೇಪರ್ ಡಿಲಕ್ಸ್ ವಿಸ್ಕಿಯ ಬಾಟೆಲಿಗಳು ಇದ್ದು ಕಂಡು ಬಂದಿರುತ್ತದೆ, 2 ನೇ ಪೆಟ್ಟಿಗೆಯಲ್ಲಿ 90 ಎಂ ಎಲ್ ನ 38 ಬ್ಯಾಗ್ಪೇಪರ್ ಡಿಲಕ್ಸ್ ?ವಿಸ್ಕಿಯ ಟೆಟ್ರಾ ಪ್ಯಾಕ್ ಗಳು ಇದ್ದು ಕಂಡು ಬಂದಿರುತ್ತದೆ, 3 ನೇ ಪೆಟ್ಟಿಗೆಯಲ್ಲಿ 90 ಎಂ ಎಲ್ ನ 50 ರಾಜಾವಿಸ್ಕಿಯ ಟೆಟ್ರಾ ಪ್ಯಾಕ್ ಗಳು ಕಂಡು ಬಂದಿರುತ್ತವೆ. 4 ನೇ ಪೆಟ್ಟಿಗೆಯಲ್ಲಿ 90 ಎಂ ಎಲ್ ನ 17 ಮ್ಯಾಕ್ ಡೋವೆಲ್ ಇಂಡಿಯ ಬ್ರಾಂಡಿಯ ಟೆಟ್ರಾ ಪ್ಯಾಕ್ ಗಳು ಕಂಡು ಬಂದಿರುತ್ತವೆ. ಸದರಿ ಎಲ್ಲಾ ಮದ್ಯವು ಪರವಾನಗಿ ಇಲ್ಲದೆ ಶೇಖರಣೆ ಮಾಡಿಕೊಂಡು ಮಾರಾಟ ಮಾಡುತ್ತಿರುವುದು ಅಬಕಾರಿ ಕಾಯ್ದೆ ಕಲಂ 14, 15, 32(1), 38 ಎ, ಹಾಗೂ 43 ರ ಪ್ರಕಾರ ಶಿಕ್ಷಾರ್ಹ ಅಪರಾಧವಾಗಿರುತ್ತದೆ ಎಂದು ಬಂದ ಪಂಚರಿಗೆ ತಿಳಿಸಲಾಯಿತು. ನಂತರ ಅಲ್ಲಿ ದೊರೆತಂಥಹ ಎಲ್ಲಾ ಮದ್ಯದ

ಪ್ಯಾಕುಗಳನ್ನು ಪಂಚರ ಸಮಕ್ಷಮ ಜಪಿಪ್ತ ಪಡಿಸಿಕೊಳ್ಳಲಾಯಿತು. ನಂತರ ದೊರೆತ ಮದ್ಯದ ಪ್ಯಾಕೇಟ್ ಗಳಲ್ಲಿ ಬ್ಯಾಗ್ ಪೇಪರ್ ಡಿಲಕ್ಸ್ ವಿಸ್ಕಿಯ 370 ಎಂ ಎಲ್ ನ 2 ಬಾಟೆಲುಗಳನ್ನು ಹಾಗೂ ಬ್ಯಾಗ್ ಪೆಪರ್ ನ 90 ಎಂ ಎಲ್ ನ 10 ಪ್ಯಾಕ್ ಗಳು , 90 ಎಂ ಎಲ್ ನ ರಾಜಾ ವಿಸ್ಕಿಯ 10 ಬಾಟೆಲುಗಳನ್ನು ಹಾಗೂ 90 ಎಂ ಎಲ್ ನ ಮ್ಯಾಕ್ ಡೊವೆಲ್ ಬ್ರಾಂಡಿಯ 5 ಟೆಟ್ರಾ ಪ್ಯಾಕ್ ಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಮದರಿಗಳನ್ನು ತೆಗೆಯಲಾಯಿತು. ಅವುಗಳನ್ನು ತೆಗೆದು ಬಿಳಿ ಬಟ್ಟೆಯಿಂದ ಸುತ್ತಿ ದಾರದಿಂದ ಕಟ್ಟಿ ಇಲಾಖೆಯ ಮೊಹರಾದಂತಹ 21 ಬಿ ಎಂಬ ನಂಬರ್ ನ ಮೊಹರಿನಿಂದ ಸೀಲು ಮಾಡಲಾಯಿತು. ನಂತರ ಪಂಚರುಗಳ ಸಹಿ ಪಡೆದ ಮಾದರಿ ನಕಲಿನ ಚೀಟಿಯನ್ನು ಸದರಿ ರಾಸಾಯನಿಕ ಪರೀಕ್ಷೆಗೆ ತೆಗೆದ ಸ್ಯಾಂಪಲ್ ಗಳ ಮೇಲೆ ಅಂಟಿಸಲಾಯಿತು. ತದ ನಂತರ ಈ ಪ್ರಕ್ರಿಯೆಯಲ್ಲಿ ತಪ್ಪಿಸಿಕೊಂಡ ಆರೋಪಿಯನ್ನು ಮುಂದಿನ ದಿನಗಳಲ್ಲಿ ಬಂಧಿಸುವುದಾಗಿ ಕಛೇರಿಗೆ ತಿಳಿಸಲಾಯಿತು. ನಂತರ ಮಹಜರು ಕ್ರಮವನ್ನು ಸಂಜೆ 6.00 ರಿಂದ 7.00 ಗಂಟೆವರೆಗೆ ಜರುಗಿಸಲಾಯಿತು. ನಂತರ ಠಾಣೆಗೆ ಬಂದು ಎಫ್ ಐ ಆರ್ ಅನ್ನು ದಾಖಲಿಸಿರುತ್ತೇನೆ. ಮುಂದಿನ ಕ್ರಮಕ್ಕಾಗಿ ಚಾಸಾ-9 ರವರಿಗೆ ಕಡತವನ್ನು ನೀಡಿರುತ್ತೇನೆ.

ಈಗ ಸಾಕ್ಷಿಗೆ ಮಹಜರನ್ನು ತೋರಿಸಲಾಗಿ ಅದರಲ್ಲಿನ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಮಹಜರನ್ನು ನಿಪಿ-1 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ಪಂಚರಿಗೆ ನೀಡಿದ ನೋಟೀಸುಗಳನ್ನು ತೋರಿಸಲಾಗಿ ಅದರಲ್ಲಿನ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸದರಿ ನೋಟೀಸುಗಳನ್ನು ಕ್ರಮವಾಗಿ ನಿಪಿ-2 ಮತ್ತು ನಿಪಿ-3 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಮತ್ತು ನಿಪಿ-3(ಎ) ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ಶೋಧನಾ ಸಮುಚಿತ ವಾರೆಂಟ್ ಅನ್ನು ತೋರಿಸಲಾಗಿ ಅದರಲ್ಲಿನ ತಮ್ಮ ಸಹಿಯನ್ನು ನೋಡಿ

ಗುರುತಿಸಿದ್ದರಿಂದ ಸದರಿ ವಾರೆಂಟ್ ಅನ್ನು ನಿಪಿ-4 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ಲಿಸ್ಟ್ ಆಫ್ ಆರ್ಟಿಕಲ್ಸ್ ತೋರಿಸಲಾಗಿ ಅದರಲ್ಲಿನ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸದರಿಯನ್ನು ನಿಪಿ-5 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ಮಾದರಿ ಮೊಹರಿನ ನಕಲುಗಳನ್ನು ತೋರಿಸಲಾಗಿ ಅದರಲ್ಲಿನ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸದರಿಯನ್ನು ನಿಪಿ-6 ಮತ್ತು 7 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-6(ಎ) ಮತ್ತು ನಿಪಿ-7(ಎ) ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ಪಿರ್ಯಾದಿಯನ್ನು ತೋರಿಸಲಾಗಿ ನೋಡಿ ಗುರುತಿಸಿದ್ದರಿಂದ ಸದರಿ ಪಿರ್ಯಾದಿಯನ್ನು ನಿಪಿ-8 ಎಂದು ಸಾಕ್ಷಿಯ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ಪ್ರಥಮ ವರ್ತಮಾನ ವರಧಿಯನ್ನು ತೋರಿಸಲಾಗಿ ನೋಡಿ ಗುರುತಿಸಿದ್ದರಿಂದ ಪ್ರ.ವ.ವ.ವನ್ನು ನಿಪಿ-9 ಎಂದು ಸಾಕ್ಷಿಯ ಸಹಿಯನ್ನು ನಿಪಿ-9(ಎ) ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ಚಾಸಾ-9 ರವರಿಗೆ ಕಡತವನ್ನು ವಹಿಸಿದ ಬಗ್ಗೆ ಅರ್ಜಿಯನ್ನು ತೋರಿಸಲಾಗಿ ನೋಡಿ ಗುರುತಿಸಿದ್ದರಿಂದ ಸದರಿ ಅರ್ಜಿಯನ್ನು ನಿಪಿ-10 ಎಂದು ಸಾಕ್ಷಿಯ ಸಹಿಯನ್ನು ನಿಪಿ-10(ಎ) ಎಂದು ಗುರುತಿಸಲಾಯಿತು.

ಮುದ್ದೆಮಾಲುಗಳನ್ನು ನೋಡಿದರೆ ಗುರುತಿಸುತ್ತೇನೆ. ಈಗ ಸಾಕ್ಷಿಗೆ 375 ಮಿಲಿಯ 2 ಬ್ಯಾಗ್ ಪೇಪರ್ ಡಿಲಕ್ಸ್ ವಿಸ್ಕಿಯ ಬಾಟಲಿಗಳನ್ನು ತೋರಿಸಲಾಗಿ ನೋಡಿ ಗುರುತಿಸಿದುದ ಅವುಗಳನ್ನು ಒಟ್ಟಾಗಿ ಮುದ್ದೆಮಾಲು 1 ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ 90 ಎಂ ಎಲ್ ನ 10 ಬ್ಯಾಗ್ಪೇಪರ್ ಡಿಲಕ್ಸ್ ವಿಸ್ಕಿಯ ಟೆಟ್ರಾ ಪ್ಯಾಕ್ ಗಳನ್ನು ತೋರಿಸಲಾಗಿ ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಮುದ್ದೆಮಾಲು 2 ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ 90 ಎಂ ಎಲ್ ನ 10 ರಾಜಾವಿಸ್ಕಿಯ ಟೆಟ್ರಾ ಪ್ಯಾಕ್ ಗಳನ್ನು ತೋರಿಸಲಾಗಿ ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಮುದ್ದೆಮಾಲು 3

ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ 90 ಎಂ ಎಲ್ ನ 5 ಮ್ಯಾಕ್ ಡೋವೆಲ್ ಇಂಡಿಯ ಬ್ರಾಂಡಿಯ ಟೆಟ್ರಾ ಪ್ಯಾಕ್ ಗಳನ್ನು ತೋರಿಸಲಾಗಿ ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಮುದ್ದೆಮಾಲು 4 ಎಂದು ಗುರುತಿಸಲಾಯಿತು. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ, ಈಗ ಆರೋಪಿಯು ನ್ಯಾಯಾಲಯದಲ್ಲಿ ಇದ್ದಾರೆ.

**ಪಾಟೀ ಸವಾಲು ಃ- ಶ್ರೀ. ಎಸ್ ಜಿ ಯು** ವಕೀಲರಿಂದ **ಆರೋಪಿಗಳ** ಪರವಾಗಿ ಃ-

ಮಾಹಿತಿ ಯಾರು ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಮಾಹಿತಿ ಯಾರು ಕೊಟ್ಟಿರುತ್ತಾರೆ ಎಂದು ಹೇಳಲು ಬರುವುದಿಲ್ಲ ಕಾರಣ ಕಾನೂನಿನಲ್ಲಿ ಸದರಿ ಮಾಹಿತಿಯನ್ನು ಕೊಟ್ಟವರ ಹೆಸರು ಬಹಿರಂಗ ಪಡಿಸಲು ಇರುವುದಿಲ್ಲ ಎಂದು ನುಡಿಯುತ್ತಾರೆ. ಮಾಹಿತಿಯನ್ನು ಎಷ್ಟು ಗಂಟೆಗೆ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ 5.00 ಗಂಟೆಗೆ ಎಂದು ನುಡಿಯುತ್ತಾರೆ, ನೀವು ಎಲ್ಲಿ ಇದ್ದಾಗ ಮಾಹಿತಿಯನ್ನು ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಕುದೂರು ಗ್ರಾಮದಲ್ಲಿ ಇದ್ದಾಗ ಎಂದು ನುಡಿಯುತ್ತಾರೆ. ಮಾಹಿತಿ ಬಂದ ನಂತರ ನೀವು ಏನು ತಯಾರಿ ಮಾಡಿಕೊಂಡು ಬಂದಿರುತ್ತೀರಿ ಎಂದರೆ ಸಾಕ್ಷಿ ತಯಾರಿ ಏನು ಮಾಡಿಕೊಂಡಿರುವುದಿಲ್ಲ , ಪರಿಶೀಲಿಸಲು ನಮ್ಮ ಸಿಬ್ಬಂದಿಗಳೊಂದಿಗೆ ಹೋಗಿರುತ್ತೇನೆ ಎಂದು ನುಡಿಯುತ್ತಾರೆ. ನೇರವಾಗಿ ಸ್ಥಳಕ್ಕೆ ಹೋಗಿರುತ್ತೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಕುದೂರಿನಿಂದ ಘಟನಾ ಸ್ದಳಕ್ಕೆ ಹೋಗಲು ಸುಮಾರು 20- 25 ನಿಮಿಷ ಆಗುತ್ತದೆಯೇ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಿಮ್ಮ ಸಿಬ್ಬಂದಿಗಳು ಯಾರು ಯಾರು ಇದ್ದರು ಎಂದರೆ ಸಾಕ್ಷಿ ರಾಮಪ್ಪ, ಮಂಜುನಾಥ ಹಾಗೂ ಹನುಮಂತ ಇದ್ದರು ಎ ಂದು ನುಡಿಯುತ್ತಾರೆ. ಸ್ಥಳ ಮುಂಚೆ ನಿಮಗೆ ಗೊತ್ತಿತ್ತ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಅದೇ ರೀತಿ ಊರಿನಲ್ಲಿ ಬೇರೆ ಯಾವುದೇ ಅಂಗಡಿಗಳನ್ನು ಪರಿಶೀಲನೆ ಮಾಡಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ಕುದೂರು ಮತ್ತು ತುಮಕೂರು ರಸ್ತೆಯಲ್ಲಿ ಸುಮಾರು ಅಂಗಡಿಗಳು ಇವೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ಎಲ್ಲಾ ಅಂಗಡಿಗಳನ್ನು ಪರಿಶೀಲನೆ ಮಾಡಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಮಹಜರ್ ಮಾಡುವ ಸಮಯದಲ್ಲಿ ಸದರಿ ಅಂಗಡಿಯು ಸರ್ವೇ ನಂಬರ್ ನಲ್ಲಿ ಇತ್ತೊ ಅಥವಾ ಖಾತಾ ನಂಬರ್ ನಲ್ಲಿ ಇತ್ತೊ ಎಂದು ವಿಚಾರಣೆ ಮಾಡಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಮಹಜರ್ ಕಾಲದಲ್ಲಿ ಸದರಿ ಜಾಗದ ಮಾಲೀಕರು ಯಾರು ಎಂದು ಪರಿಶೀಲನೆ ಮಾಡಿರುತ್ತೀರಾ ಎಂದರೆ ಸಾಕ್ಷಿ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ಜಾಗದ ಸರ್ವೆ ನಂಬರ್ ಹಾಗೂ ಖಾತೆ ನಂಬರ್ ಬಗ್ಗೆ ನಿಮಗೆ ಮಾಹಿತಿ ಇದೆಯೇ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ನಿಮ್ಮ ಇಲಾಖಾ ಅಂಕಿಅಂಶ ತೋರಿಸಲು ಆರೋಪಿಯ ವಿರುದ್ದ ಸುಳ್ಳು ದೂರನ್ನು ದಾಖಲಿಸಿಕೊಂಡಿರುತ್ತೀರ ಎಂದರೆ ಸಾಕ್ಷಿ ಇಲ್ಲ ಮಾಹಿತಿ ಬಂದ ಆಧಾರದ ಮೇಲೆ ಹೋಗಿರುತ್ತೇವೆ ಎಂದು ನುಡಿಯುತ್ತಾರೆ. ಆರೋಪಿಯು ಓಡಿಹೋದಾಗ ಹಿಡಿಯಲು ಪ್ರಯತ್ನ ಪಡಬಹುದಿತ್ತು ಎಂದರೆ ಸಾಕ್ಷಿ ನಮ್ಮ ಸಿಬ್ಬಂದಿಗಳು ಪ್ರಯತ್ನ ಪಟ್ಟಿರುತ್ತಾರೆ ಆದರೂ ತಪ್ಪಿಸಿಕೊಂಡು ಓಡಿಹೋಗಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಅಂಗಡಿಯು ಯಾರ ಹೆಸರಿನಲ್ಲಿ ಇತ್ತು ಎಂದು ನಿಮಗೆ ಮಾಹಿತಿ ಇತ್ತೆ ಎಂದರೆ ಸಾಕ್ಷಿ ಮಾಹಿತಿ ಇತ್ತು ಎಂದು ನುಡಿಯುತ್ತಾರೆ. ಮಹಜರ್ ನಲ್ಲಿ ಎಸ್ ಎಸ್ ಕುಮಾರ್ ಬಿನ್ ಸುಗ್ಗಯ್ಯ ರವರ ಅಂಗಡಿ ಎಂದು ನಮೂದಿಸಿದ್ದು ಅದನ್ನು ಖಚಿತ ಪಡಿಸಿಕೊಳ್ಳಲು ದಾಖಲೆ ನೋಡಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಮಹಜರ್ ನಲ್ಲಿ

ತೋರಿಸಿರುವ ಚೆಕ್ಕುಬಂಧಿ ತುಮಕೂರು ಗಡಿ ಭಾಗಕ್ಕೆ ಸಂಬಂಧಪಟ್ಟಿದ್ದು ಎಂದರೆ ಸಾಕ್ಷಿ ತುಮಕೂರು ಗಡಿ ಆದರೆ ಮಾಗಡಿ ತಾಲ್ಲೂಕಿಗೆ ಸಂಬಂಧಿಪಟ್ಟಿದ್ದು ಎಂದು ನುಡಿಯುತ್ತಾರೆ. ಆರೋಪಿಯು ಮದ್ಯಶೇಖರಣೆ ಮಾಡಿಕೊಂಡು ಮಾರಾಟ ಮಾಡುತ್ತಿದ್ದರು ಎಂದು ಹೇಳಿರುವ ಅಂಗಡಿಯು ಮಾಗಡಿ ತಾಲ್ಲೂಕಿನ ವ್ಯಾಪ್ತಿಗೆ ಬರುವುದಿಲ್ಲ ಎಂದರೆ ಸಾಕ್ಷಿ ಮಾಗಡಿ ತಾಲ್ಲೂಕಿನ ವ್ಯಾಪ್ತಿಗೆ ಬರುತ್ತದೆ ಎಂದು ನುಡಿಯುತ್ತಾರೆ. ಸದರಿ ಅಂಗಡಿಯಲ್ಲಿ ಬೇರೆ ಏನು ಮಾರಾಟ ಮಾಡುತ್ತಿದ್ದರು ಎಂಬುದರ ಬಗ್ಗೆ ಪರಿಶೀಲನೆ ಮಾಡಿರುತ್ತೀರಾ ಎಂದರೆ ಸಾಕ್ಷಿ ದಿನಸಿ ಅಂಗಡಿ ಇದ್ದು ಸಣ್ಣ ಪುಟ್ಟ ಸಾಮಾಗ್ರಿಗಳನ್ನು ಮಾರಾಟ ಮಾಡುತ್ತಿದ್ದರು ಎಂದು ನುಡಿಯುತ್ತಾರೆ, ಸದರಿ ವಿಚಾರವನ್ನು ಮಹಜರ್ ನಲ್ಲಿ ಹೇಳಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ಅಂಗಡಿಯ ಸುತ್ತ ಮುತ್ತ ಮನೆಗಳು ಇರುವುದರ ಬಗ್ಗೆ ಮಾಹಿತಿ ಕೊಟ್ಟಿರುತ್ತೀರಾ ಎಂದರೆ ಸಾಕ್ಷಿ ಮನೆಗಳು ಇವೆ ಎಂದು ನುಡಿಯುತ್ತಾರೆ. ಸದರಿ ಮನೆಯವರ ಹೇಳಿಕೆಯನ್ನು ಪಡೆದಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನೀವು ವಶಪಡಿಸಿಕೊಂಡಿರುವ ಎಲ್ಲಾ ಮದ್ಯದ ಬಾಟೆಲಿಗಳು ಆ ಅಂಗಡಿಯಲ್ಲಿ ದೊರೆತಿರುವುದಿಲ್ಲವೆಂದರೆ ಸಾಕ್ಷಿ ದೊರೆತಿರುತ್ತವೆ ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ಪಂಚರಾಗಿ ಚನ್ನಪ್ಪ ಮತ್ತು ಪಿಳ್ಳಯ್ಯ ಎಂಬುವವರು ಇದ್ದಿರಲಿಲ್ಲ , ನೀವು ಠಾಣೆಯಲ್ಲೆ ಕೂತು ತಯಾರು ಮಾಡಿರುತ್ತೀರಾ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಮುದ್ದೆಮಾಲು 1 ರಿಂದ 4 ರ ಬ್ಯಾಚ್ ನಂಬರ್ ಗಳನ್ನು ಮಹಜರ್ ನಲ್ಲಿ ಬರೆದಿರುವುದಿಲ್ಲವೆಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಮುದ್ದೆಮಾಲು 1 ರಿಂದ 4 ಗಳು ನಿಮ್ಮ ಠಾಣೆಯಲ್ಲಿ ಇದ್ದಂತಹವುಗಳು ಅವುಗಳನ್ನು ಈ ಪ್ರಕರಣದಲ್ಲಿ

ಸೇರಿಸಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಸೀಲು ಹಾಗು ಸಹಿಯನ್ನು ಠಾಣೆಯಲ್ಲೆ ಪಡೆದಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಆ ಕಾರಣದಿಂದಲೇ ನಿಪಿ-6 ಮತ್ತು 7 ರಲ್ಲಿ ಸಾಕ್ಷಿದಾರರ ಸಹಿ ಮಾತ್ರ ಇದ್ದು ವಿಳಾಸ ಇರುವುದಿಲ್ಲವೆಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ. ನಿಪಿ-8 ಅನ್ನು ನೀವು ಠಾಣೆಯಲ್ಲೆ ಕೂತು ತಯಾರು ಮಾಡಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ನಿಪಿ-5 ರಲ್ಲಿ ಮುದ್ದೆಮಾಲುಗಳ ಬ್ಯಾಚ್ ನಂಬರ್ ಹಾಗೂ ಯಾವ ಇಸವಿಯಲ್ಲಿ ತಯಾರು ಮಾಡಿರುತ್ತಾರೆ ಎಂದು ಬರೆದಿರುವುದಿಲ್ಲ ಎಂದರೆ ಸಾಕ್ಷಿ ಬರೆದಿರುವುದಿಲ್ಲವೆಂದು ನುಡಿಯುತ್ತಾರೆ. ಆರೋಪಿಯು ಯಾವುದೇ ಅಂಗಡಿಯನ್ನು ಇಟ್ಟುಕೊಂಡಿರುವುದಿಲ್ಲ ಹಾಗೂ ಮದ್ಯವನ್ನು ಮಾರಾಟ ಮಾಡುತ್ತಿರಲಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ನಿಮ್ಮ ಠಾಣಾ ಅಂಕಿಅಂಶವನ್ನು ತೋರಿಸಲು ಆರೋಪಿಯ ವಿರುದ್ದ ಸುಳ್ಳು ಪಿರ್ಯಾದಿಯನ್ನು ದಾಖಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಹಾಗೂ ಸ್ಥಳದಲ್ಲಿ ಯಾವುದೇ ಮದ್ಯದ ಬಾಟಲಿಗಳನ್ನು ಹಾಗೂ ಟೆಟ್ರಾ ಪ್ಯಾಕ್ ಗಳನ್ನು ಜಪ್ತಿ ಪಡಿಸಿಕೊಂಡಿರುವುದಿಲ್ಲ ಎಂದರೆ ಸಾಕ್ಷಿ ಸುಳ್ಳು ಹೇಳುತ್ತಿರುವುದಿಲ್ಲವೆಂದು ನುಡಿಯುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್?ಸಿ. ಮಾಗಡಿ.**